8

# ಸತ್ತವರ ಪುನರುತ್ಥಾನ

*"ಅದಕ್ಕೆ ಆಶ್ಚರ್ಯಪಡಬೇಡಿರಿ; ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು" (ಯೋಹಾನ 5:28, 29).*

ಹಿಂದಿನ ಸಂಸ್ಕೃತಿಗಳ ಧರ್ಮಗಳು ಸತ್ತವರೊಳಗಿಂದ ಪುನರುತ್ಥಾನವನ್ನು ಕುರಿತ ಬೋಧನೆಗಳಲ್ಲಿ ವಿವಿಧತೆಯುಳ್ಳವರಾಗಿದ್ದರೂ ಅವರಲ್ಲಿ ಹೆಚ್ಚಾದವರು ಒಂದು ರೀತಿಯ ಅನಂತರದ ಜೀವಿತದಲ್ಲಿ ನಂಬಿದ್ದರು. ಐಗುಪ್ತ್ಯರು ತಮ್ಮ ಅರಸುಗಳ ಮತ್ತು ಅಧಿಕಾರಿಗಳ ದೇಹಗಳನ್ನು ಸಿದ್ಧಪಡಿಸುತ್ತಿದ್ದರು ಮತ್ತು ಅವರ ಸಮಾಧಿಗಳನ್ನು ಅನಂತರದ ಜೀವನದಲ್ಲಿ ಉಪಯುಕ್ತವಾಗುವವೆಂದು ಅವರು ಯೋಚಿಸಿ ವಸ್ತುಗಳನ್ನು ಇಡುತ್ತಿದ್ದರು. ಗ್ರೀಕರು "ಪರಕಾಯ ಪ್ರವೇಶವನ್ನು," ಆತ್ಮದ ಪ್ರಯಾಣವನ್ನು ಬೋಧಿಸಿದರು. ಯೆಹೂದಿ ಪರಿಶುದ್ಧಬರಹಗಳು ಸೂಚಿಸಿದವು ಆದರೆ ಪುನರುತ್ಥಾನದ ಬಗ್ಗೆ ಯಾವುದೇ ಸಂದೇಹವಿಲ್ಲದ ಪ್ರಕಟನೆಯನ್ನು ಕೊಡಲಿಲ್ಲ. ಎರಡು ಪ್ರಮುಖ ಪಂಗಡಗಳಾಗಲಿಕ್ಕೆ ಇದು ಕಾರಣವಾಗಿರಬಹುದು: ಸದ್ದುಕಾಯರು, ಇವರು ಪುನರುತ್ಥಾನದಲ್ಲಿ ನಂಬಿಕೆ ಇಡದವರು (ಮತ್ತಾಯ 22:23), ಮತ್ತು ಫರಿಸಾಯರು, ಇವರು ನಂಬಿಕೆ ಇಟ್ಟವರು (ಅಪೊಸ್ತಲರ ಕೃತ್ಯಗಳು 23:8). ಪುರಾತನ ಜಗತ್ತು ಪ್ರಕಟಣೆಯಿಲ್ಲದೆ ಅನಂತರದ ಜೀವನದ ಬಗ್ಗೆ ತನ್ನ ಸ್ವಂತ ಮನೋಭಾವನೆಯನ್ನು ಬೆಳಿಸಿಕೊಂಡರು ಆದರೆ ಅದಕ್ಕಾಗಿ ನಿರೀಕ್ಷೆಯನ್ನು ಕಟ್ಟುವದಕ್ಕೆ ಬಲವಾದ ಅಸ್ತಿವಾರದ ಕೊರತೆಯುಳ್ಳವರಾಗಿದ್ದರು (ಎಫೆಸ 2:12; ಥೆಸಲೊನೀಕ 4:13).

ಪುನರುತ್ಥಾನ ಇರುವುದು ಎಂಬುದರ ಬಗ್ಗೆ ಸಂದೇಹವಿಲ್ಲದ ಪುರಾವೆಯನ್ನು ಹೊಸ ಒಡಂಬಡಿಕೆಯು ನಮಗೆ ಕೊಡುತ್ತದೆ. ಅವನು ವಿವರಿಸಲು ಉಪಯೋಗಿಸಿದ ಪದಗಳು *anastasis* (ಮತ್ತಾಯ 22:23; ಲೂಕ 14:14; ಯೋಹಾನ 5:29; ಅಪೊಸ್ತಲರ ಕೃತ್ಯಗಳು 1:22; 2:31), *anistemi* (ಮತ್ತಾಯ 17:9; 20:19; ಲೂಕ 16:31; ಅಪೊಸ್ತಲರ ಕೃತ್ಯಗಳು 2:24; 13:33), ಮತ್ತು *egeiro* (ಯೋಹಾನ 5:21; 12:1, 17; ಅಪೊಸ್ತಲರ ಕೃತ್ಯಗಳು 3:15). ಈ ಪದಗಳು ಸತ್ತವರೆಲ್ಲರ ಪುನರುತ್ಥಾನಕ್ಕೆ ಅವಶ್ಯಕ ವಾಗಿ ಸಂಬಂಧಿಸಿರದಿದ್ದರೂ ಸಂಧರ್ಭಕ್ಕನುಸಾರವಾದ ಉಪಯೋಗವು ಅದರಂತೆ ಅರ್ಥಹೊಂದಿದೆ ಎಂದು ತೀರ್ಮಾನಿಸಬಹುದು.

ಪುನರುತ್ಥಾನವು ಇರುವುದೆಂದು ಬೋಧಿಸುವ ಕೆಲವು ವಾಕ್ಯಭಾಗಗಳು ಯೋಹಾನ 5:25-29; ಅಪೊಸ್ತಲರ ಕೃತ್ಯಗಳು 24:15; ಮತ್ತು 1 ಕೊರಿಂಥ 15:22.

## ಯೇಸುವು ಎಬ್ಬಿಸಲ್ಪಟ್ಟನೋ?

ಯೇಸುವಿನ ಪುನರುತ್ಥಾನವು ಮತ್ತು ಸತ್ತುಹೋದವರೆಲ್ಲರ ಪುನರುತ್ಥಾನವು

ಹೊಸ ಒಡಂಬಡಿಕೆಯ ಮಹತ್ವದ ಮುಖ್ಯ ಪ್ರಸ್ತಾಪವಾಗಿದೆ. ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಮತ್ತು ನಾವು ಎಬ್ಬಿಸಲ್ಪಡುವೆವು ಎಂದು ಬೈಬಲು ಧೈರ್ಯದಿಂದ ಒಪ್ಪಿಕೊಳ್ಳುತ್ತದೆ (1 ಪೇತ್ರ 1:3, 4). ಯೇಸುವಿನ ಅದ್ಭುತಕಾರ್ಯಗಳ ಮತ್ತು ಬೋಧನೆಗಳ ಬಗ್ಗೆ ಅಪೊಸ್ತಲರು ಪ್ರಭಾವಿತರಾಗಿದ್ದರು. ಆತನ ಮರಣವು ಅವರನ್ನು ಗಲಿಬಿಲಿಗೊಳಿಸಿತ್ತು ಮತ್ತು ಅವರನ್ನು ನಿರಾಶರನ್ನಾಗಿ ಮಾಡಿತ್ತು. ಆದರೆ ಪುನರುತ್ಥಾನವು ಆತನು ಮೆಸ್ಸೀಯನಾಗಿರುವನು, ದೇವರ ಕುಮಾರನಾಗಿರುವನು ಎಂಬುದನ್ನು ಅವರಿಗೆ ದೃಢಪಡಿಸಿತ್ತು (ಅಪೊಸ್ತಲರ ಕೃತ್ಯಗಳು 2:32-36). ಯೇಸುವಿನ ಪುನರುತ್ಥಾನದ ಬೋಧನೆಯು ಅವರಿಗೆ ಕೇಂದ್ರವಾಗಿತ್ತು; ಅದು ನಮಗೂ ಕೇಂದ್ರವಾಗಿತ್ತು; ಯಾಕಂದರೆ ಯೇಸುವು ಎಬ್ಬಿಸಲ್ಪಡದಿದ್ದರೆ, ಆಗ ಆತನು ಕ್ರಿಸ್ತನಾಗಿರುವದಿಲ್ಲ, ನಾವಿನ್ನೂ ನಮ್ಮ ಪಾಪದಲ್ಲಿರುವೆವು, ಮತ್ತು ಕ್ರಿಸ್ತನಲ್ಲಿ ನಿರೀಕ್ಷೆಗಾಗಿ ಇಲ್ಲವೇ ನಮ್ಮ ಸ್ವಂತ ಪುನರುತ್ಥಾನದಲ್ಲಿ ತಳಹದಿ ಇರುವದಿಲ್ಲ. ಪೌಲನು ಈ ರೀತಿಯಲ್ಲಿ ಹೇಳಿದ್ದಾನೆ:

> ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ, ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ. ಇದು ಮಾತ್ರವಲ್ಲದೆ ಕ್ರಿಸ್ತನವರಾಗಿ ನಿದ್ರೆ ಹೋದವರು ನಾಶವಾದರು. ಈ ಜೀವಮಾನ ಕಾಲದ ಪೂರ್ತಿಗೆ ನಾವು ಕ್ರಿಸ್ತನಲ್ಲಿ ನಿರೀಕ್ಷೆಯಿಟ್ಟು ಕೊಂಡದ್ದೇ ಹೊರತು ಮತ್ತೇನೂ ಇಲ್ಲದಿದ್ದರೆ ಎಲ್ಲಾ ಮನುಷ್ಯರಲ್ಲಿಯೂ ನಿರ್ಭಾಗ್ಯರೇ ಸರಿ (1 ಕೊರಿಂಥ 15:17-19).

ಆದಿ ಸಭೆಯ ಸಂದೇಶದ ಕೇಂದ್ರವು ಯೇಸುವಿನ ಪುನರುತ್ಥಾನವಾಗಿತ್ತು (ಅಪೊಸ್ತಲರ ಕೃತ್ಯಗಳು 1:22; 2:31; 4:2, 33; 17:18, 32; 23:6). ಪೌಲನ ಪ್ರಸಂಗವು ಯಾವುದೇ ಸೂಚನೆಯನ್ನು ಕೊಟ್ಟರೂ (ಅಪೊಸ್ತಲರ ಕೃತ್ಯಗಳು 24:15, 21; 1 ಕೊರಿಂಥ 15:12), ಅದು ಸಭೆಯಲ್ಲಿ ಅತೀ ಮಹತ್ವದ ಪ್ರಸ್ತಾಪವಾಗಿತ್ತು. ಸಭೆಯ ಪ್ರಯತ್ನವು ಮನವೊಲಿಸುವ, ವೈಜ್ಞಾನಿಕ ಪುರಾವೆಯನ್ನು ಪುನರುತ್ಥಾನಕ್ಕಾಗಿ ಒದಗಿಸುವದಾಗಿರಲಿಲ್ಲ; ಅದು ಸಾಧ್ಯವಾದದ್ದಾಗಿರಲೂ ಇಲ್ಲ; ಆದರೆ ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟದ್ದನ್ನು ಅವರು ನೋಡಿದ ಸಾಕ್ಷಿಯನ್ನು ಕೊಟ್ಟರು (ಅಪೊಸ್ತಲರ ಕೃತ್ಯಗಳು 2:32; 4:33; 1 ಕೊರಿಂಥ 15:4-8) - ಪರಿಶುದ್ಧ ಬರಹಗಳಲ್ಲಿ ಮುಂತಿಳಿಸಲ್ಪಟ್ಟ ಪುನರುತ್ಥಾನದ ಬಗ್ಗೆ ಹೇಳಿದರು (ಅಪೊಸ್ತಲರ ಕೃತ್ಯಗಳು 2:29-31; 1 ಕೊರಿಂಥ 15:4). ಈ ಸಾಕ್ಷಿಯ ಮೇಲೆ ಅವಲಂಭಿಸಿ, ಸಭೆಯು ರೋಮನ್ ಜಗತ್ತಿನಲ್ಲೆಲ್ಲಾ ಮತ್ತು ಆಗ ತಿಳಿದ ಜಗತ್ತಿನ ದೂರದ ಭಾಗಗಳಿಗೂ ಸಭೆಯು ಅರಣ್ಯಬೆಂಕಿಯಂತೆ ಹಬ್ಬಿಕೊಂಡಿತು (ಕೊಲೊಸ್ಸೆ 1:23). ಅವರ ಸಾಕ್ಷಿಯ ಸತ್ಯತೆಯು ಅವರ ಹತಸಾಕ್ಷಿ ಮರಣದ ಮುಖಾಂತರ ಘೋಷಿಸಲ್ಪಟ್ಟಿತು.

## ಆತನ ಪುನರುತ್ಥಾನವು ಯಾವುದರಂತೆ ಇತ್ತು?

ನಮ್ಮ ಪುನರುತ್ಥಾನವು ಯೇಸುವಿನ ಪುನರುತ್ಥಾನದ ಸ್ವಭಾವವನ್ನು ಅನುಸರಿಸುವದರಿಂದ ಆತನ ಪುನರುತ್ಥಾನದ ತಿಳುವಳಿಕೆಯು ನಮ್ಮ ಪುನರುತ್ಥಾನವನ್ನು ಅರ್ಥ ಮಾಡಿಕೊಳ್ಳುವದಕ್ಕೆ ನಮಗೆ ಸಹಾಯ ಮಾಡುವುದು.

ಯೇಸುವಿನ ಪುನರುತ್ಥಾನವಾದ ದೇಹವು ಯಾವುದರಂತೆ ಇತ್ತು? ಸಮಾಧಿಯಲ್ಲಿ ಇಡಲ್ಪಟ್ಟ ಯೇಸುವಿನ ದೇಹವು ತೆಗೆದು ಹಾಕಲ್ಪಟ್ಟಿತು, ಎಬ್ಬಿಸಲ್ಪಡಲಿಲ್ಲ ಎಂದು ಕೆಲವರು ನಂಬುತ್ತಾರೆ. ಇದರ ನಂತರ, ಯೇಸುವು ಆತ್ಮಿಕವಾದ, ಪರಲೋಕದ

ಸ್ವಭಾವವನ್ನು ತೆಗೆದು ಕೊಂಡನು. ಆತನು ಆತನ ಅನುಯಾಯಿಗಳಿಂದ ನೋಡಲ್ಪಟ್ಟಾಗ, ಅವರು ತಾವು ನೋಡಿದವನೇ ಆಗಿದ್ದಾನೆ ಎಂದು ಅವರು ತಿಳಿಯುವಂತೆ ಆದನು ಎಂದು ನಂಬುತ್ತಾರೆ.

ಯೇಸುವಿನ ದೇಹವು ಎಬ್ಬಿಸಲ್ಪಟ್ಟಿತು ಆದರೆ ಮಹಿಮೆ ಹೊಂದಿದ, ಆತ್ಮಿಕ ದೇಹವಾಗಿ ಬದಲಾಯಿತು ಎಂದು ಇತರರು ನಂಬುತ್ತಾರೆ. ಅದು ಹೂಣಲ್ಪಟ್ಟ ದೇಹವೇ ಆಗಿತ್ತು, ಆದರೆ ಅದು ಶಾರೀರಿಕವಾಗಿದ್ದುದರ ಬದಲು ಆತ್ಮಿಕ ದೇಹವಾಗಿ ಎಬ್ಬಿಸಲ್ಪಟ್ಟಿತು. ಆತನ ಪುನರುತ್ಥಾನವಾದ ದೇಹವು, ಪುನರುತ್ಥಾನದ ನಂತರ ಕ್ರೈಸ್ತರಿಗಿರುವ ಮಹಿಮೆಯುಳ್ಳ, ಆತ್ಮಿಕ ದೇಹದಂತೆ ಆಯಿತೆಂದು ಅವರು ತಿಳಿಯುತ್ತಾರೆ.

ಯೇಸುವು ಶಾರೀರಿಕ ದೇಹವನ್ನು ತೆಗೆದುಕೊಂಡಾಗ, ಆತನು ಭೂಲೋಕಕ್ಕೆ ಬರುವ ಮೊದಲು ಅನುಭವಿಸಿದ ತನ್ನ ಆತ್ಮದ ಅಸ್ತಿತ್ವವನ್ನು ಎಂದೆಂದಿಗೂ ಬಿಟ್ಟುಬಿಟ್ಟನು ಎಂದು ಕೆಲವರು ಬೋಧಿಸುತ್ತಾರೆ. ಮಹಿಮೆ ಪಡಿಸಲ್ಪಟ್ಟ, ಪುನರುತ್ಥಾನ ಹೊಂದಿದ ಮಾನವ ದೇಹವನ್ನು ಸದಾಕಾಲಕ್ಕೂ ತೆಗೆದು ಕೊಳ್ಳುವದಕ್ಕಾಗಿ, ಆ ಆತ್ಮಿಕ ಅಸ್ತಿತ್ವವನ್ನು ಬಿಟ್ಟು ಕೊಟ್ಟನು ಎಂದು ಹೇಳಿ ಅವರು ವಾದ ಮಾಡುತ್ತಾರೆ. ಈ ದೇಹವನ್ನು ತೆಗೆದು ಕೊಳ್ಳುವುದು ಆತನ ಭಾಗವಾಗಿ ಪಾಪಿ ಮಾನವನಿಗಾಗಿ ಆತನ ತ್ಯಾಗವಾಗಿತ್ತು.

ಎಬ್ಬಿಸಲ್ಪಟ್ಟ ಯೇಸುವಿನ ದೇಹವು ಸಮಾಧಿಯಲ್ಲಿ ಇಡಲ್ಪಟ್ಟ ಬದಲಾಗದ ಶಾರೀರಿಕ ದೇಹವಾಗಿತ್ತು ಎಂದು ಇನ್ನು ಇತರರು ನಂಬಿದರು. ಪರಲೋಕದ ಭೌತಿಕವಲ್ಲದ ಪರಿಮಾಣದೊಳಗೆ ಆತನು ಏರಿ ಹೋಗುವವರೆಗೆ ಆತನು ತನ್ನ ಈ ದೇಹವನ್ನು ಉಳಿಸಿಕೊಂಡಿದ್ದನು ಮತ್ತು ಆಮೇಲೆ ಅದು ಬಿಡಲ್ಪಟ್ಟಿತು.

ಪುನರುತ್ಥಾನವಾದ ಯೇಸುವು ಕೆಲವರಿಂದ ಯಾಕೆ ಗುರುತಿಸಲ್ಪಡಲಿಲ್ಲ (ಯೋಹಾನ 21:4) ಮತ್ತು ಮುಚ್ಚಿದ ಬಾಗಿಲುಗಳ ಮುಖಾಂತರ ಹೇಗೆ ದಾಟಿಹೋದನು (ಯೋಹಾನ 20:19) ಎಂಬುದನ್ನು ವಿವರಿಸುವದಕ್ಕಾಗಿ ಮೊದಲಿನ ಎರಡು ದೃಷ್ಟಿಕೋನಗಳು ತೆಗೆದು ಕೊಳ್ಳಲ್ಪಟ್ಟಿದೆ. ಈ ಘಟನೆಗಳು ಆತನಿಗೆ ಪ್ರಾಕೃತ ದೇಹವಿರದೇ ಆತ್ಮಿಕ ದೇಹವಿತ್ತೆಂದು ಸೂಚಿಸುತ್ತವೆ; ಹಾಗಿದ್ದರೂ ಆತನು ತನ್ನ ಮರಣಕ್ಕಿಂತ ಮೊದಲು ಆತನು ಯಾವಾಗಲೂ ಗುರುತಿಸಲ್ಪಡಲಿಲ್ಲ (ಮತ್ತಾಯ 14:26), ಮತ್ತು ಆತನನ್ನು ಕೊಲ್ಲುವದಕ್ಕಾಗಿ ಜನರ ಗುಂಪು ಆತನನ್ನು ಹುಡುಕುತ್ತಿದ್ದಾಗ ಜನರ ಮಧ್ಯದಲ್ಲಿ ಆತನು ದಾಟಿಹೋದನು (ಲೂಕ 4:29, 30). ಆತನು ನೀರಿನ ಮೇಲೆಯೂ ನಡೆದನು (ಮತ್ತಾಯ 14:26) - ಇದು ದೈವಿಕ ಬಲದಿಂದ ಸಹಾಯ ಪಡೆಯದಿದ್ದರೆ ಶಾರೀರಿಕ ದೇಹಕ್ಕೆ ಅಸಾಧ್ಯವಾದದ್ದಾಗಿರುತ್ತದೆ.

ಆತನ ಸೇವೆಯ ಪ್ರಾರಂಭದಲ್ಲಿ ತನ್ನ ದೇಹದ ಪುನರುತ್ಥಾನದ ಬಗ್ಗೆ ಯೇಸುವು ಮುಂತಿಳಿಸಿದನು. "ಈ ದೇವಾಲಯವನ್ನು ಕೆಡವಿರಿ; ನಾನು ಮೂರು ದಿನದಲ್ಲಿ ಅದನ್ನು ಎಬ್ಬಿಸುವೆನು" (ಯೋಹಾನ 2:19) ಎಂದು ಆತನು ಹೇಳಿದನು. ಯೆಹೂದ್ಯರು ಆತನು ಯೆರೂಸಲೇಮಿನ ದೇವಾಲಯದ ಬಗ್ಗೆ ಹೇಳುತ್ತಿರುವನು ಎಂದು ತಿಳಿದರು ಆದರೆ "ಆತನು ತನ್ನ ದೇಹವೆಂಬ ದೇವಾಲಯದ ವಿಷಯವಾಗಿ ಆ ಮಾತನ್ನು ಹೇಳಿದ್ದನು" (ಯೋಹಾನ 2:21). ಆತನು ಎಬ್ಬಿಸಲ್ಪಟ್ಟಾಗ ಆತನ ಶಿಷ್ಯರು ಆತನ ವಾಗ್ದಾನವನ್ನು ಜ್ಞಾಪಿಸಿಕೊಂಡರು ಮತ್ತು ನಂಬಿದರು (ಯೋಹಾನ 2:22). ಯೇಸುವು ತನ್ನ ದೇಹದ ಪುನರುತ್ಥಾನ ನಂಬಿದ್ದನು ಮತ್ತು ಅದರ ಬಗ್ಗೆ ಪ್ರವಾದನೆ ಹೇಳಿದನು. ಆತನ ದೇಹವು ಎಬ್ಬಿಸಲ್ಪಡದಿದ್ದರೆ, ಆತನು ಸುಳ್ಳು ಪ್ರವಾದಿಯಾಗಿದ್ದನು.

ಯೇಸುವು ತನ್ನ ಪುನರುತ್ಥಾನ ನಂತರ ತನಗಿದ್ದ ದೇಹವು ಶಿಲುಬೆಯ ಮೇಲೆ ಸತ್ತುಹೋದ ದೇಹವಾಗಿತ್ತು ಎಂದು ವಿಫುಲ ರುಜುವಾತು ಕೊಟ್ಟನು, ಯಾಕಂದರೆ

ಆತನ ದೇಹಕ್ಕೆ ಆತನು ಶಿಲುಬೆಗೆ ಹಾಕಲ್ಪಟ್ಟದ್ದರಿಂದ ಆದ ಗಾಯಗಳ ಪುರಾವೆ ಇನ್ನೂ ಇತ್ತು (ಯೋಹಾನ 20:25-29). ಆತನ ದೇಹವನ್ನು ಮುಟ್ಟಬಹುದಾಗಿತ್ತು (ಮತ್ತಾಯ 28:9; ನೋಡಿರಿ ಲೂಕ 24:39; ಯೋಹಾನ 20:17, 27) ಮತ್ತು ಆತನಿಗೆ ಮಾಂಸ, ಎಲುಬುಗಳ ದೇಹವಿರುವುದೆಂಬುದನ್ನು ರುಜುವಾತು ಪಡಿಸಲು ಆತನು ಆಹಾರವನ್ನು ತಿಂದನು (ಲೂಕ 24:41-43). "ನನ್ನ ಕೈಗಳನ್ನೂ ಕಾಲುಗಳನ್ನೂ ನೋಡಿರಿ, ನಾನೇ ಅಲ್ಲವೇ ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು, ಅವು ಭೂತಕ್ಕಿಲ್ಲ" ಎಂದು ಅವರಿಗೆ ಹೇಳಿದನು (ಲೂಕ 24:39). ಹೀಗೆ ಯೇಸುವು ತನ್ನ ಎಬ್ಬಿಸಲ್ಪಟ್ಟ ದೇಹವು ಶಿಲುಬೆಯಿಂದ ತೆಗೆದು ಕೊಳ್ಳಲ್ಪಟ್ಟು ಸಮಾಧಿಯಲ್ಲಿ ಇಡಲ್ಪಟ್ಟ ಅದೇ ದೇಹವಾಗಿದೆ ಎಂದು ಬೋಧಿಸಿದನು. ಎಮ್ಮಹುವಿನ ದಾರಿಯಲ್ಲಿ ಇಬ್ಬರು ಶಿಷ್ಯರು ಆತನ ಗುರುತುಹಿಡಿಯಲಿಲ್ಲ, ಯಾಕಂದರೆ ಹಾಗೆ ಮಾಡದಂತೆ ಅವರ ಕಣ್ಣುಗಳು ಪ್ರತಿಬಂಧಿಸಲ್ಪಟ್ಟಿದ್ದವು (ಲೂಕ 24:16), ಆತನು ಗುರುತಿಸಲ್ಪಡದವನಾಗಿದ್ದುದರಿಂದ ಅಲ್ಲ, ಅನಂತರದಲ್ಲಿ ಅವರ ಕಣ್ಣುಗಳು ತೆರೆಯಲ್ಪಟ್ಟಾಗ ಅವರು ಆತನನ್ನು ಗುರುತಿಸಿದರು (ಲೂಕ 24:31). ಆತನು ಸಂಪೂರ್ಣವಾಗಿ ಭಿನ್ನವಾಗಿದ್ದರೆ, ಅವರ ಕಣ್ಣುಗಳು ತೆರೆಯಲ್ಪಟ್ಟಿದ್ದು ಅವರು ಆತನನ್ನು ಗುರುತಿಸಲು ಶಕ್ತರನ್ನಾಗಿ ಮಾಡುತ್ತಿರಲಿಲ್ಲ, ಮತ್ತು ಆತನು ಎಬ್ಬಿಸಲ್ಪಟ್ಟಿದ್ದಾನೆ ಎಂಬುದನ್ನು ನಿಶ್ಚಿತವಾಗಿ ತಿಳಿದು ಕೊಳ್ಳುತ್ತಿರಲಿಲ್ಲ.

ಯೇಸುವು ತನ್ನ ಪುನರುತ್ಥಾನವು ಪ್ರಶ್ನಿಸಲ್ಪಡಬಾರದೆಂದು ಸಾಕಷ್ಟು ಜನರಿಗೆ ತನ್ನನ್ನು ತೋರಿಸಿಕೊಂಡನು. ಒಂದೇ ಸಮಯದಲ್ಲಿ ಐದುನೂರಕ್ಕಿಂತಲೂ ಹೆಚ್ಚು ಜನರನ್ನು ಒಳಗೊಂಡ ಸಾಕ್ಷಿಗಳನ್ನು ಪೌಲನು ಯಾದಿ ಮಾಡಿದ್ದಾನೆ (1 ಕೊರಿಂಥ 15:3-7). ಒಪ್ಪಿಕೊಂಡ ನಂಬಲರ್ಹ ಇಬ್ಬರು ಸಾಕ್ಷಿಗಳು ವಕೀಲನಿಗಿದ್ದರೆ, ಅದು ನಿಸ್ಸಂದೇಹವಾದ ವ್ಯಾಜ್ಯವಾಗಿದೆ. ನ್ಯಾಯಾಲಯದಲ್ಲಿ ಯೇಸುವಿನ ದೈಹಿಕ ಪುನರುತ್ಥಾನಕ್ಕಾಗಿ ವ್ಯಾಜ್ಯವು ಗೆಲ್ಲುವುದು ಹಾಗೂ ಅನೇಕ ಸಾಕ್ಷಿಗಳ ಸಾಕ್ಷಿಯ ಮೇಲೆ ಅವಲಂಭಿಸಿ ಅಲ್ಲಗಳೆಯದ ಘಟನೆಯೆಂದು ತೀರ್ಮಾನಿಸಲ್ಪಡುವುದು.

## ಏನು ಎಬ್ಬಿಸಲ್ಪಡುವುದು?

ನಮ್ಮ ಪುನರುತ್ಥಾನವು ಯೇಸುವು ಅನುಭವಿಸಿದ ಪುನರುತ್ಥಾನದಂತಿರುವುದೋ? ನಮ್ಮ ದೇಹಗಳು ಎಬ್ಬಿಸಲ್ಪಡುವವೋ? ನಮ್ಮ ದೇಹಗಳು ಎಬ್ಬಿಸಲ್ಪಟ್ಟರೆ, ಅವು ಯಾವ ರೀತಿಯಲ್ಲಿ ಇರುವವು? ನಮ್ಮ ಪ್ರಾಣಗಳು ಮತ್ತು ಆತ್ಮಗಳು ನಮ್ಮ ದೇಹಗಳೊಂದಿಗೆ ಪುನಃ ಕೊಡಲ್ಪಡುವವೋ?

ಮರಣದ ಸಮಯದಲ್ಲಿ ದೇಹವು ಸಮಾಧಿಯಲ್ಲಿ ಇಡಲ್ಪಡುತ್ತದೆ (ಯೋಬ 21:32), ಮತ್ತು ಅದು ಭೂಮಿಗೆ ಹಿಂದಿರುಗಿ ಹೋಗುತ್ತದೆ (ಆದಿಕಾಂಡ 3:19), ಆದರೆ ಇದು ಪ್ರಾಣ ಮತ್ತು ಆತ್ಮದೊಂದಿಗೆ ಹಾಗಿರುವದಿಲ್ಲ. ಅವು ದೇಹವನ್ನು[1] ಬಿಟ್ಟು ಅದೃಶ್ಯ ಲೋಕಕ್ಕೆ ಹೋಗುತ್ತವೆ (ಲೂಕ 16:22, 23).

ಪುನರುತ್ಥಾನದ ಸಮಯದಲ್ಲಿ, ತಮ್ಮ ಸಮಾಧಿಗಳಲ್ಲಿಯ ದೇಹಗಳು ಯೇಸುವಿನ ಸ್ವರವನ್ನು ಕೇಳಿ, ಹೊರಗೆ ಬರುವವು (ಯೋಹಾನ 5:28, 29). ಪ್ರಾಣ ಮತ್ತು ಆತ್ಮ ಸಮಾಧಿಯಲ್ಲಿ ಇರುವದಿಲ್ಲ, ಆದುದರಿಂದ ದೇಹ ಮಾತ್ರ ಎಬ್ಬಿಸಲ್ಪಡುವುದು. ಪ್ರಾಣ ಮತ್ತು ಆತ್ಮ, ಸಮಾಧಿಯಲ್ಲಿ ಇಲ್ಲದಿರುವಂಥವುಗಳು ಆದರೆ ಹೆಡೆಸ್‌ನಲ್ಲಿರುವಂಥವುಗಳು, ಹೆಡೆಸ್‌ನಿಂದ ಹೊರಗೆ ಬರುವವು (ಪ್ರಕಟನೆ 20:13). ಅವು ಹೆಡೆಸ್‌ನಲ್ಲಿ ವಾಸಿ

ಸುತ್ತಿದ್ದರಿಂದ, ಅವುಗಳಿಗೆ ಇನ್ನೂ ಅರುಹುವುಳ್ಳವುಗಳೂ ಸಜೀವವಾದವುಗಳೂ ಆಗಿರುವವು. ದೇಹವು ಎಬ್ಬಿಸಲ್ಪಡದಿದ್ದರೆ, ಪುನರುತ್ಥಾನವು ಇರುವದಿಲ್ಲ. ದೇಹವು ಎಬ್ಬಿಸಲ್ಪಡದಿದ್ದರೆ, ತೀರಿಹೋದವರ ದೇಹಗಳನ್ನು ಎಬ್ಬಿಸಲು ಯೇಸುವು ಭೂಲೋಕಕ್ಕೆ ಬರುವ ಅವಶ್ಯಕತೆಯಿರಲಿಲ್ಲ; ಅದರ ಬದಲು ಪ್ರಾಣಗಳನ್ನೂ ಆತ್ಮಗಳನ್ನೂ ಎಬ್ಬಿಸಲು ಹೆಡೆಸ್‌ಗೆ ಹೋಗುವ ಅವಶ್ಯಕತೆಯಿರುತ್ತದೆ. ಹಾಗಿದ್ದರೂ, ಸತ್ತವರನ್ನು ಅವರ ಸಮಾಧಿಗಳಿಂದ ಕೂಡಿಸಲು ಯೇಸುವು ಹಿಂದಿರುಗಿ ಬರಲಿರುವನು (1 ಥೆಸಲೊನೀಕ 4:16; ನೋಡಿರಿ ಯೋಹಾನ 5:28, 29), ದೇಹವು ಎಬ್ಬಿಸಲ್ಪಡುವುದು ಎಂಬುದಕ್ಕೆ ಒಳ್ಳೇ ಸೂಚನೆಯಾಗಿದೆ.

ಯೇಸುವಿನ ಹಿಂದಿರುಗುವಿಕೆಯಿಂದ ದೇಹದ ಪುನರುತ್ಥಾನವು ಅನ್ವಯಿಸಿರುವುದು ಮಾತ್ರವಲ್ಲದೇ, ಬೈಬಲು ಸಹ ದೇಹವು ಸಜೀವವಾಗಿ ಮಾಡಲ್ಪಡುವುದು ಎಂದು ಹೇಳುತ್ತದೆ: "ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ, ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯ ದೇಹಗಳನ್ನು ಸಹ ಬದುಕಿಸುವನು" (ರೋಮಾಪುರ 8:11; ನೋಡಿರಿ 8:23). ನಾಶವಾಗುವ, ಪ್ರಾಕೃತವಾದ ದೇಹವು "ಅದು" ಆಗಿದ್ದು, ಅದು ಮರಣದ ಸಮಯದಲ್ಲಿ ತೆಗೆದು ಹಾಕಲ್ಪಡುತ್ತದೆ ಆದರೆ "ಅದು" ಆತ್ಮಿಕವಾದದ್ದಾಗಿ ಮತ್ತು ನಶಿಸ ಹೋಗದಂಥದ್ದಾಗಿ ಎಬ್ಬಿಸಲ್ಪಡುತ್ತದೆ. "ಅದು" ಅದೇ ದೇಹವಾಗಿರುತ್ತದೆ, ಕೇವಲ "ಅದು" ಬದಲಾಯಿಸಲ್ಪಟ್ಟಿರುತ್ತದೆ (1 ಕೊರಿಂಥ 15:51), ಆತ್ಮಿಕ ಅಸ್ತಿತ್ವದಲ್ಲಿ ಬದಲಾಯಿಸಲ್ಪಟ್ಟಿರುತ್ತದೆ. ದೇಹವು ಎಬ್ಬಿಸಲ್ಪಡದಿದ್ದರೆ, ಮತ್ತು ಅದೇ ಸಮಯದಲ್ಲಿ ಆತ್ಮಿಕ ದೇಹವಾಗಿ ಬದಲಾಯಿಸಲ್ಪಟ್ಟರೆ, ಆಗ ನಾವು, "ಎಲ್ಲರೂ (ಬದುಕಿರುವವರೊ ಸತ್ತವರೊ) ನಾಶವಾಗುವದರಿಂದ" ನಶವಾಗದಿರುವಿಕೆಗೆ, ಮರಣದಿಂದ ಅಮರತ್ವಕ್ಕೆ "ಒಂದೇ ಕ್ಷಣದಲ್ಲಿ, ಕಣ್ಣುತೆರೆದು ಮುಚ್ಚುವದರೊಳಗಾಗಿ" ಬದಲಾಯಿಸಲ್ಪಡುವದಿಲ್ಲ (1 ಕೊರಿಂಥ 15:51-54). ಪ್ರಾಣ ಮತ್ತು ಆತ್ಮಗಳು ಪಾತಾಳದಲ್ಲಿ ಸಜೀವವಾಗಿದ್ದರೆ, ಪುನರುತ್ಥಾನವು ದೇಹಕ್ಕೆ ಮಾತ್ರ ಸಂಬಂಧಿಸಿರುತ್ತದೆ.

ಕೊಳೆತು ಹೋದ ದೇಹದ ಪುನರುತ್ಥಾನವು ಅಸಾಧ್ಯವೆಂದು ಕೆಲವರು ಆಕ್ಷೇಪಿಸುತ್ತಾರೆ. ಈ ಆಕ್ಷೇಪಣೆಯು ದೇವರ ಬಲವನ್ನೂ (ಮಾರ್ಕ 12:24) ಮತ್ತು ಕೆಲ ಸಮಯದ ವರೆಗೆ ಸತ್ತು ಹೋಗಿದ್ದವರ ಸಮಾಧಿಗಳನ್ನು ತೆರೆದು ಜನರನ್ನು ಜೀವಕ್ಕೆ ತಂದ ದೇವರ ಸಂಗತಿಯನ್ನು ಕಡೆಗಣಿಸುತ್ತದೆ. ಯೇಸುವು ಶಿಲುಬೆಗೆ ಹಾಕಲ್ಪಟ್ಟಾಗ ಪುನರುತ್ಥಾನ ಹೊಂದಿದವರು ಆತನ ಪುನರುತ್ಥಾನದನಂತರ ಯೆರೂಸಲೇಮಿನೊಳಗೆ ಹೋದರು (ಮತ್ತಾಯ 27:52, 53). ಸತ್ತು ಹೋದ ಅವರನ್ನು ದೇವರು ಎಬ್ಬಿಸಬಹುದಾದರೆ, ಸಮಯದ ಅಂತ್ಯದಲ್ಲಿ ಆತನು ನಮ್ಮೆಲ್ಲರನ್ನೂ ಎಬ್ಬಿಸಬಲ್ಲನು.

## ನಮ್ಮ ದೇಹಗಳು ಯಾವುದರಂತಿರುವವು?

ಪುನರುತ್ಥಾನಗೊಂಡ ದೇಹವು ಒಬ್ಬನ ಇಂದಿನ ದೇಹದಂತೆ ಇರುವದಿಲ್ಲ (1 ಕೊರಿಂಥ 15:37). ಅದು ನಾಶನವಾದ ಮತ್ತು ಆತ್ಮಿಕವಾಗದ ದೇಹವಾಗಿರುವುದು, ಮಹಿಮೆಯ ಮತ್ತು ಬಲದ ದೇಹವಾಗಿರುವುದು, ಪಾರಲೌಕಿಕ ರೂಪದಲ್ಲಿ ಬದಲಾದದ್ದು ಆಗಿರವುದು (1 ಕೊರಿಂಥ 15:48, 49). ಅದು ಪ್ರಾಕೃತಿಕ ದೇಹವಾಗಿರುವದಿಲ್ಲ, ಯಾಕಂದರೆ "ಮಾಂಸ, ರಕ್ತಗಳು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು, ಲಯವಾಗುವ ವಸ್ತು ನಿರ್ಲಯ ಪದವಿಗೆ ಬಾಧ್ಯವಾಗುವದಿಲ್ಲ" (1 ಕೊರಿಂಥ 15:50). ನಾವು ಯೇಸುವಿನಂತೆ

ಇರುವೆವು (1 ಯೋಹಾನ 3:2), "ಆತನು ಎಲ್ಲವನ್ನೂ ತನಗೆ ಅಧೀನಮಾಡಿಕೊಳ್ಳ ಲಾಗುವ ಪರಾಕ್ರಮವನ್ನು ಸಾಧಿಸಿ ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರ ಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು" (ಫಿಲಿಪ್ಪಿ 3:21; KJV) ಆತ್ಮಿಕ ಜೀವಿಗಳಂತೆ ನಾವು ದೇವದೂತರಂತೆ ಇರುವೆವು ಮತ್ತು ಮದುವೆ ಮಾಡಿಕೊಳ್ಳುವದಿಲ್ಲ (ಮತ್ತಾಯ 22:30; ನೋಡಿರಿ ಮಾರ್ಕ 12:25; ಲೂಕ 20:34-36).

ನಮ್ಮ ರಚನೆಯು ಇನ್ನು ಮುಂದೆ ಪ್ರಾಕೃತಿಕವಾದದ್ದಾಗಿರುವದಿಲ್ಲ. ಪುನರುತ್ಥಾನದ ಸಮಯದಲ್ಲಿ ನಾವು ಆತ್ಮಿಕವಾದ, ನಿತ್ಯವಾದ, ಮಾನವನ ಕಣ್ಣಿಗೆ ಅಗೋಚರವಾದ ಪರಿಮಾಣದಲ್ಲಿ (2 ಕೊರಿಂಥ 4:18), ನಾವು ಮರಣ ಹೊಂದಲಾರದ ದೇವರ ಅಸ್ತಿತ್ವದ ಲೋಕದೊಳಗೆ ಪ್ರವೇಶಿಸುವೆವು (ಲೂಕ 20:36).

## ಪುನರುತ್ಥಾನದ ಸಮಯದಲ್ಲಿ ಏನು ಸಂಭವಿಸುವುದು?

ಸತ್ತವರ ಪುನರುತ್ಥಾನದ ಬಗ್ಗೆ ಅನೇಕ ಪ್ರಶ್ನೆಗಳು ಕೇಳಲ್ಪಟ್ಟಿರುವವು? ಯಾರು ಎಬ್ಬಿಸಲ್ಪಡುವರು? ಪುನರುತ್ಥಾನವು ಯಾವಾಗ ಸಂಭವಿಸುವುದು? ಪುನರುತ್ಥಾನದ ನಂತರ ನಾವು ಹೇಗಿರುವೆವು? ಹೊಸ ಒಡಂಬಡಿಕೆಯಲ್ಲಿ ಈ ಉತ್ತರಗಳು ಕೊಡಲ್ಪಟ್ಟಿವೆ:

(1) ಯೇಸುವು ಪುನಃ ಬರುವಾಗ ಅದು ಸಂಭವಿಸುವುದು (1 ಕೊರಿಂಥ 15:22, 23; 1 ಥೆಸಲೊನೀಕ 4:13-18).

(2) ಒಳ್ಳೆಯವರೂ ಕೆಟ್ಟವರೂ ಸತ್ತವರೆಲ್ಲರೂ ಎಬ್ಬಿಸಲ್ಪಡುವರು (ಯೋಹಾನ 5:28, 29; ನೋಡಿರಿ ಅಪೊಸ್ತಲರ ಕೃತ್ಯಗಳು 24:15).

(3) ಅದೇ ತಾಸಿನಲ್ಲಿ, ಅದೇ ಸಮಯದಲ್ಲಿ ನೀತಿವಂತರೂ ದುಷ್ಟರೂ ಎಬ್ಬಿಸಲ್ಪಡುವರು (ಯೋಹಾನ 5:28, 29).

(4) ಪುನರುತ್ಥಾನದ ಸಮಯದಲ್ಲಿ ಭೂಲೋಕದ ಮೇಲೆ ಜನರು ಜೀವಿಸುತ್ತಿರುವರು (1 ಕೊರಿಂಥ 15:51; 1 ಥೆಸಲೊನೀಕ 4:17).

(5) ಜೀವಿತರು ಭೂಲೋಕದಿಂದ ತೆಗೆದು ಕೊಳ್ಳಲ್ಪಡುವ ಮೊದಲು ಇರುವುದು (1 ಥೆಸಲೊನೀಕ 4:16, 17),

(6) ಪುನರುತ್ಥಾನ ಹೊಂದಿದ ಸತ್ತವರೂ ಹಾಗೂ ಜೀವಿತರೂ ಒಟ್ಟಾಗಿ ಆಕಾಶದಲ್ಲಿ ಯೇಸುವನ್ನು ಸಂದರ್ಶಿಸುವರು (1 ಥೆಸಲೊನೀಕ 4:17).

(7) ಯೇಸುವಿನ ಮತ್ತು ಪ್ರಧಾನ ದೇವದೂತನ ಧ್ವನಿಗಳು ಕೇಳಲ್ಪಡುವವು, ದೇಹಗಳನ್ನು ಅವುಗಳ ಸಮಾಧಿಯಿಂದ ಕರೆಯಲು ತುತೂರಿಗಳು ಊದಲ್ಪಡುವವು (ಯೋಹಾನ 5:25, 28; 1 ಕೊರಿಂಥ 15:51, 52; 1 ಥೆಸಲೊನೀಕ 4:16). ಲಾಜರನನ್ನು ಎಬ್ಬಿಸಿದ ಧ್ವನಿಯು ಸತ್ತವರೊಳಗಿಂದ ಎಲ್ಲರನ್ನು ಎಬ್ಬಿಸುವ ಧ್ವನಿಯಾಗಿರುವುದು (ಯೋಹಾನ 11:43).

(8) ದೇವರ ಬಲವು ಸತ್ತವರನ್ನು ಎಬ್ಬಿಸುವುದು (1 ಕೊರಿಂಥ 6:14; ನೋಡಿರಿ 2 ಕೊರಿಂಥ 1:9). ತಂದೆಗೂ ಕುಮಾರನಿಗೂ ಈ ಬಲವಿರುವುದು (ಯೋಹಾನ 5:21); ಹಾಗಿದ್ದರೂ ತಂದೆಯು ಕುಮಾರನ ಮುಖಾಂತರ ಜಗತ್ತನ್ನು ಸೃಷ್ಟಿಸಿದಂತೆ (1 ಕೊರಿಂಥ 8:6), ಹಾಗೆಯೇ ಆತನು ಯೇಸುವಿನ ಮುಖಾಂತರ ಸತ್ತವರನ್ನು ಎಬ್ಬಿಸುವನು (2 ಕೊರಿಂಥ 4:14).

(9) ಪುನರುತ್ಥಾನ ಹೊಂದಿದ ದೇಹಗಳು ನಾಶನವಾಗದ ದೇಹಗಳಾಗಿರುತ್ತವೆ (1 ಕೊರಿಂಥ 15:51-54).

ಇವು ಪುನರುತ್ಥಾನದ ದಿನದಂದು ಸಂಭವಿಸುವ ಪ್ರಮುಖ ಘಟನೆಗಳಾಗಿರುತ್ತವೆ. ನಾವು ಆ ದಿನಕ್ಕಾಗಿ ಸಿದ್ಧರಾಗಿದ್ದರೆ ಅದು ಭಯಭಕ್ತಿಯ ಸಮಯವಾಗಿರುವುದು - ಉನ್ನತವಾದ ಅನುಭವವಾಗಿರುವುದು.

## ಮುಕ್ತಾಯ

ಯೇಸುವು ಹಿಂದಿರುಗಿ ಬರುವಾಗ, ಸತ್ತು ಹೋದ ಎಲ್ಲರೂ ಅವರ ಆತ್ಮಗಳು ನೂತನ ಆತ್ಮಿಕ, ನಿತ್ಯವಾದ ದೇಹಗಳೊಂದಿಗೆ ಒಂದಾಗುವಾಗ ಎಬ್ಬಿಸಲ್ಪಡುವರು. ಹೀಗೆ ಮರಣವು ಜಯಿಸಲ್ಪಡುವುದು ಹಾಗೂ ಜಯದಲ್ಲಿ ನುಂಗಲ್ಪಡುವುದು, ಅದು ಯೇಸುವಿನ ಮುಖಾಂತರ ಗೆದ್ದುಕೊಂಡ ಜಯವಾಗಿರುವುದು (1 ಕೊರಿಂಥ 15:57; ನೋಡಿರಿ ಯೋಹಾನ 11:25; ಅಪೊಸ್ತಲರ ಕೃತ್ಯಗಳು 4:2). ಈ ಮಹಾ ಘಟನೆಯು ಅಂತಿಮ ದಿನದಂದು, "ಭೂಮಿಯ ಸುಗ್ಗಿ ಮಾಡಲು" ಯೇಸುವು ಹಿಂದಿರುಗಿ ಬರುವಾಗ ಜರುಗುವುದು. "ನಾವು ಸಿದ್ಧರಾಗಿರೋಣ, ಯಾಕಂದರೆ ಆತನು ಹಿಂದಿರುಗಿಬರುವ ದಿನವನ್ನು ನಾವು ತಿಳಿದಿರುವದಿಲ್ಲ."

---

ಟಿಪ್ಪಣಿ

[1]ನೋಡಿರಿ, ಆದಿಕಾಂಡ 35:18; ಪ್ರಸಂಗಿ 12:7; 1 ಅರಸು 17:21, 22; ಲೂಕ 23:46; ಯಾಕೋಬ 2:26.

© 2009 Truth for Today